ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 140-143
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಚನ ಚಳುವಳಿಯಲ್ಲಿ ಕಾಯಕ ಜೀವಿಗಳ ಚಳುವಳಿಯ ಮಹತ್ವ

**ಡಾ.ಶ್ರೀನಿವಾಸ ಟಿ**
ಸಹಾಯಕ ಪ್ರಾಧ್ಯಾಪಕರು, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

**Abstract:**
*ವಚನ ಚಳುವಳಿಯು 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದ್ಭವಿಸಿದ ಮಹತ್ವದ ಸಾಮಾಜಿಕ ಹಾಗೂ ಧಾರ್ಮಿಕ ಚಳವಳಿಯಾಗಿದೆ. ಈ ಚಳುವಳಿಯ ಪ್ರಮುಖ ತತ್ವವಾದ "ಕಾಯಕವೇ ಕೈಲಾಸ" ಎಂಬ ಸಂದೇಶವು ಶ್ರಮದ ಗೌರವ ಮತ್ತು ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸಿತು. ಕಾಯಕ ಜೀವಿಗಳ ಪಾತ್ರವು ಸಮಾಜದಲ್ಲಿ ಜಾತಿ ಮತ್ತು ವೃತ್ತಿ ಆಧಾರಿತ ಅಸಮಾನತೆಗಳನ್ನು ಪ್ರಶ್ನಿಸುವಲ್ಲಿ ಮಹತ್ವದ ಸ್ಥಾನ ಪಡೆದಿತು. ವಚನಕಾರರು ದುಡಿಮೆ ಮತ್ತು ಪ್ರಾಮಾಣಿಕ ಜೀವನವನ್ನು ಆಧ್ಯಾತ್ಮಿಕ ಸಾಧನೆಯ ಮಾರ್ಗವಾಗಿ ಪರಿಗಣಿಸಿದರು. ಅನುಭವ ಮಂಟಪದ ಮೂಲಕ ಶ್ರಮಜೀವಿಗಳಿಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವ ಅವಕಾಶ ದೊರೆಯಿತು. ಈ ಅಧ್ಯಯನವು ವಚನ ಚಳುವಳಿಯಲ್ಲಿ ಕಾಯಕ ಜೀವಿಗಳ ಚಳುವಳಿಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಮಾನತೆಯ ದೃಷ್ಟಿಕೋನದ ಮಹತ್ವವನ್ನು ವಿಶ್ಲೇಷಿಸುತ್ತದೆ.*

**Keywords:** *ವಚನ ಚಳವಳಿ, ಕಾಯಕ ಜೀವಿಗಳು, ಕಾಯಕವೇ ಕೈಲಾಸ, ಸಾಮಾಜಿಕ ಸಮಾನತೆ, ಅನುಭವ ಮಂಟಪ*

## ಪೀಠಿಕೆ

ಹನ್ನೆರಡನೇ ಶತಮಾನದ ವಚನ ಚಳವಳಿ ಭಾರತೀಯ ಇತಿಹಾಸದಲ್ಲೇ ಅತ್ಯಂತ ಕ್ರಾಂತಿಕಾರಿ ಮತ್ತು ಅಭೂತಪೂರ್ವ ಸಾಮಾಜಿಕ, ಸಾಂಸ್ಕೃತಿಕ ಆಂದೋಲನ. ಕೇವಲ ಧಾರ್ಮಿಕ ಸುಧಾರಣೆಗೆ ಸೀಮಿತವಾಗದ ಈ ಚಳವಳಿ, ಸಮಾಜದ ಕೆಳಸ್ತರದಲ್ಲಿದ್ದ ಶೋಷಿತರನ್ನು, ಶ್ರಮಜೀವಿಗಳನ್ನು ಮುಖ್ಯವಾಹಿನಿಗೆ ತಂದ ವಿಶಿಷ್ಟ ಜನಪದ ಕ್ರಾಂತಿ. ಈ ಕ್ರಾಂತಿಯ ಕೇಂದ್ರಬಿಂದುವೆ ಕಾಯಕಜೀವಿಗಳು. ಅಂದಿನ ವರ್ಣಾಶ್ರಮ ಧರ್ಮ, ಜಾತಿ ಪದ್ಧತಿ ಮತ್ತು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ದೈಹಿಕ ಶ್ರಮವಹಿಸುವ ಜನರನ್ನು ಕೀಳಾಗಿ ನೋಡಲಾಗುತ್ತಿತ್ತು.

ಈ ಕಾಲದ ಸಮಾಜದಲ್ಲಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಲಿಂಗಭೇದ ಮತ್ತು ಮೂಢನಂಬಿಕೆಗಳು ವ್ಯಾಪಕವಾಗಿ ಹರಡಿದ್ದವು. ಸಮಾಜದಲ್ಲಿ ವಾಸಿಸುವ ಕೆಳವರ್ಗದ ಜನರು ಅನೇಕ ಶೋಷಣೆಗಳಿಗೆ ಒಳಗಾಗಿದ್ದರು. ಇಂತಹ ಸಂದರ್ಭದಲ್ಲಿ ಮಹಾನ್ ಸಮಾಜ ಸುಧಾರಕರಾದ ಬಸವಣ್ಣನವರು ಸಮಾನತೆ, ಶ್ರಮದ ಗೌರವ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ಮಹತ್ತರ ಸಾಮಾಜಿಕ ಚಳವಳಿಯನ್ನು ಆರಂಭಿಸಿದರು. ಯಾವುದೇ ಕಾಯಕ ಜೀವಿಗಳ ಮೂಲನೆಲೆ ಬದುಕಿನ ಮೂಲಸ್ರೋತವಾದಂತಹ ಆರ್ಥಿಕ ಜೀವನ ಸ್ವರೂಪವನ್ನು ಅವಲಂಬಿಸಿ ಕೊಂಡೇ ಇರುತ್ತದೆ.

**Please cite this article as:** ಶ್ರೀನಿವಾಸ, ಟಿ. (2026). ವಚನ ಚಳುವಳಿಯಲ್ಲಿ ಕಾಯಕ ಜೀವಿಗಳ ಚಳುವಳಿಯ ಮಹತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 140–143

ಕರ್ನಾಟಕದಲ್ಲಿ ವಚನಕಾರರ ಚಳವಳಿ ಏಕೆ, ಹೇಗೆ ಹುಟ್ಟಿತೆಂದು ಹೇಳುವಾಗ ಅನೇಕರು ಒಂದೇ ಬಾರಿಗೆ ಧರ್ಮ ಜಡವಾಗಿತ್ತು. ಜನರಿಗೆ ಅರ್ಥವಾಗದ ರೀತಿಯಲ್ಲಿ ಪುರೋಹಿತರು ವ್ಯವಹರಿಸುತ್ತಿದ್ದರು ಇತ್ಯಾದಿಯಾದ ದುರ್ಬಲವಾದ ಕಾರಣಗಳನ್ನು ನೀಡುತ್ತಿದ್ದರು. ಇಂತಹ ಎಲ್ಲಾ ಕಾರಣಗಳಿಂದ ಬಸವಣ್ಣನವರ ಮನಸ್ಸು ಕಲಕಿ ಹೊಸ ಪಂಥದ ಬೆಳವಣಿಗೆಗೆ ಕಾರಣರಾದರೆಂದು ಹೇಳುತ್ತಾರೆ. ಹಾಗೆ ನೋಡಿದರೆ ವೈದಿಕ ಧರ್ಮ ಅದರ ಆರಂಭದಿಂದಲು ಎಂದೂ ಜನಸಾಮಾನ್ಯರ ಧರ್ಮವಾಗಿರಲೇ ಇಲ್ಲ. ಅಥವಾ ಈ ಕಾಲದಲ್ಲಿ ಅದು ಜಡವಾಗ ಬೇಕಾದ ಅಗತ್ಯವೂ ಇರಲಿಲ್ಲ. ಇದಲ್ಲದೆ ಬಸವಣ್ಣನಿಗಿಂತ ಹಿಂದೆಯೇ ಇದನ್ನು ವಿರೋಧಿಸಿದವರು 11ನೇ ಶತಮಾನದ ಮಧ್ಯಭಾಗದಿಂದಲೇ ನಮಗೆ ಕಾಣಿಸುತ್ತಾರೆ. 10ನೇ ಶತಮಾನದಲ್ಲಿ ಪ್ರಬಲವಾಗಿ ಬೆಳೆದ ಜೈನಧರ್ಮ ಬೆಳೆಯುವುದಕ್ಕೂ ವೈದಿಕ ಧರ್ಮದ ವಿಫಲತೆ ಇರುವ ಸಾಧ್ಯತೆಗಳಿವೆ. ಅದರಂತೆಯೇ 11ನೇ ಶತಮಾನದ ಮಧ್ಯಭಾಗದಿಂದ ಆರಂಭವಾಗಿ 12ನೇ ಶತಮಾನದ ಮಧ್ಯಭಾಗದಲ್ಲಿ ಉತ್ಕರ್ಷವನ್ನು ಕಂಡ ವಚನಕಾರರ ಚಳವಳಿಗು ಕೆಲವು ಮಹತ್ವದ ಅಂಶಗಳು ಕೆಲಸ ಮಾಡಿರುವುದನ್ನು ಅದರ ಚಾರಿತ್ರಿಕ ಬೆಳವಣಿಗೆಯಲ್ಲಿ ನಾವು ಗುರ್ತಿಸಬಹುದು.

11ನೇ ಶತಮಾನದ ಕೊನೆಯ ಭಾಗದ ಜನಜೀವನದ ಸ್ಥಿತಿಗತಿಗಳನ್ನು ಗಮನಿಸಿದರೆ ಆಳರಸರ ಅಸ್ಥಿರವಾದ ಆಡಳಿತದ ಕಾರಣದಿಂದಾಗಿ ಸಾಮಾನ್ಯ ಜನರು ಮತ್ತು ಇತರೆ ಕೆಲಸಗಾರರು ಬಹಳಷ್ಟು ದಂಡ ತೆರಬೇಕಾಗಿ ಬರುತ್ತಿತ್ತು. ರಾಜರ ಐಷಾರಾಮಿ ಜೀವನ, ಮಠಗಳು ಮತ್ತು ವ್ಯಾಪಾರಿಗಳು ಜನರನ್ನು ಸುಲಿಗೆ ಮಾಡುತ್ತಿದ್ದರು. ವಚನಕಾರರು ಹುಟ್ಟಿ ಬೆಳೆದ ಭಾಗದಲ್ಲಿ ವೃತ್ತಿಗಳನ್ನು ಅವಲಂಬಿಸಿ ಕೊಂಡು ಬದುಕುತ್ತಿದ್ದ ಜನರ ಮೇಲೆ ಹಾಕಲಾಗಿದ್ದ ತೆರಿಗೆಗಳನ್ನು ಗಮನಿಸಿದರೆ ವಚನಕಾರರಾಗಿ ಬಂದ ಬಹಳಷ್ಟು ಜನ ಕಾಯಕಜೀವಿಗಳೆ ಆಗಿರುವುದೇಕೆ ಎಂಬುದು ನಮಗೆ ತಿಳಿಯುತ್ತದೆ. ಈ ಕಾಲದ ಶಾಸನಗಳನ್ನು ಗಮನಿಸಿದರೆ ಅಕ್ಕಸಾಲಿಗ, ನಾಯಿಂದ, ಅಂಬಿಗ, ಅಗಸ, ಕಮ್ಮಾರ, ಕುಂಬಾರ ಮೊದಲಾದವರು ತೆರಿಗೆಯನ್ನು ಕೊಡಬೇಕಾಗಿತ್ತು. ಇವರಲ್ಲದೆ ಗಾಣದತೆರೆ, ನೂಲುತೆರೆ, ಮಗ್ಗದೆರೆ, ಕುಲುಮೆದೆರೆ ಹೀಗೆ ಎಲ್ಲಾ ವೃತ್ತಿಯವರು ತೆರಿಗೆಯನ್ನು ಕೊಡಬೇಕಾಗಿತ್ತು. ಇದಲ್ಲದೆ ಜನರು ಅನೇಕ ಕಿರುಕುಳ ತೆರಿಗೆಗಳನ್ನು ಕೊಡಬೇಕಾಗಿತ್ತೆನ್ನುವುದನ್ನು ಶಾಸನಗಳು ಹೇಳುತ್ತವೆ. ಇಷ್ಟೆಲ್ಲಾ ತೆರಿಗೆ ನೀಡುತ್ತಿದ್ದ ಜನರು ಸಮಾಜದ ಆರ್ಥಿಕತೆಯ ಮುಖ್ಯ ಬೆನ್ನೆಲುಬಾಗಿದ್ದರೂ ಅವರನ್ನು ಅಸ್ಪೃಶ್ಯರಂತೆ, ಶೂದ್ರರಂತೆ ನಡೆಸಿ ಕೊಳ್ಳಲಾಗುತ್ತಿತ್ತು.

ವಚನ ಚಳವಳಿಗೆ ಮುನ್ನ ಸಮಾಜದಲ್ಲಿ ದೈಹಿಕ ಶ್ರಮವಹಿಸುವವರನ್ನು ಅಪವಿತ್ರರು ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಶರಣರು ಪ್ರತಿಯೊಂದು ಕಾಯಕವು ಪವಿತ್ರ ಎಂದು ಸಾರಿದರು. ಬಟ್ಟೆ ಒಗೆಯುವ, ಕಸ ಗುಡಿಸುವ, ಹಗ್ಗ ಹೊಸೆಯುವ ಕೆಲಸಗಳು ಸಹ ದೈವಿಕ ಕೆಲಸಗಳೇ ಎಂದು ಸಾರುವ ಮೂಲಕ ಶ್ರಮಕ್ಕೆ ಸಾಮಾಜಿಕ ಮನ್ನಣೆ ಮತ್ತು ಗೌರವವನ್ನು ತಂದು ಕೊಟ್ಟರು. ಜೊತೆಗೆ ಕಾಯಕ ಜೀವಿಗಳ ಹೋರಾಟದ ಮುಖ್ಯ ಗುರಿ ಜಾತಿ ಮುಕ್ತ ಸಮಾಜ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿಯೇ ಬಸವಣ್ಣನವರು ಹರಳಯ್ಯ (ಚಮ್ಮಾರ) ಮತ್ತು ಮಧುವರಸ (ಬ್ರಾಹ್ಮಣ) ಎಂಬ ಭಿನ್ನ ಜಾತಿಯ ಶರಣರ ಮಕ್ಕಳ ಮದುವೆ ಮಾಡಿಸುವ ಮೂಲಕ ಜಾತಿ ವ್ಯವಸ್ಥೆಯ ಭದ್ರ ಬುನಾದಿಯನ್ನೆ ಕತ್ತರಿಸಲು ತಮ್ಮ ವಚನಗಳನ್ನೇ ಆಯುಧಗಳನ್ನಾಗಿ ಬಳಸಿದರು. ಇಷ್ಟೇ ಅಲ್ಲದೆ ಶರಣರ ಕಾಯಕ ಮತ್ತು ದಾಸೋಹ ತತ್ವಗಳು ಸಂಪತ್ತು ಒಂದೇ ಕಡೆ ಕ್ರೋಢೀಕರಣವಾಗುವುದನ್ನು ತಡೆದವು. ಯಾರೂ ಸೋಮಾರಿಗಳಾಗದೆ ಪ್ರತಿಯೊಬ್ಬರೂ ದುಡಿದು ತಿನ್ನಬೇಕೆಂಬ ನಿಯಮ ಜಾರಿಗೆ ಬಂತು. ಅರಸನಾಗಲಿ, ಮಂತ್ರಿಯಾಗಲಿ,

ಸಾಮಾನ್ಯರಾಗಲಿ ದುಡಿಯದಿದ್ದರೆ ಸಮಾಜದಲ್ಲಿ ಗೌರವವಿಲ್ಲ ಎಂಬ ಸ್ಥಿತಿ ನಿರ್ಮಾಣವಾಯಿತು. ಇದರಿಂದಾಗಿ ಎಲ್ಲರೂ ಸಮಾನರು, ಶ್ರಮಕ್ಕೆ ಗೌರವ, ಜಾತಿಧರ್ಮದ ಭೇದಭಾವ ಬೇಡ, ಮಹಿಳೆಯರಿಗೆ ಸಮಾನ ಗೌರವ ಮುಂತಾದ ಬದಲಾವಣೆ ಇದರಿಂದ ಸಾಧ್ಯವಾಯಿತು.

ವಚನ ಚಳವಳಿಯ ಕಾಯಕ ಜೀವಿಗಳಲ್ಲಿ ಮಹಿಳೆಯರು ಅತ್ಯಂತ ಸಕ್ರಿಯವಾಗಿ ಪಾತ್ರವಹಿಸಿದ್ದರು. ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಕದಳಿಯ ರೇಮವ್ವ, ಸತ್ಯಕ್ಕ, ಪುಣ್ಯಸ್ತ್ರೀ ಇನ್ನೂ ಅನೇಕ ಮಹಿಳೆಯರು ಸ್ವತಂತ್ರವಾಗಿ ಕಾಯಕ ಮಾಡುತ್ತ ವಚನಗಳನ್ನು ರಚಿಸಿದರು. ಪುರುಷರ ತಪ್ಪುಗಳನ್ನು ತಿದ್ದುವಷ್ಟು ಬೌದ್ಧಿಕ ಸ್ವಾತಂತ್ರ್ಯವನ್ನು ಈ ಮಹಿಳೆಯರು ಹೊಂದಿದ್ದರು. ಹಾಗೆಯೆ ಅಂದಿನ ಸಾಹಿತ್ಯ ಸಂಸ್ಕೃತ ಭಾಷೆಯಲ್ಲಿ ರಾಜರ ಗುಣಗಾನ ಮಾಡುವ ಚಂಪೂ ಶೈಲಿಯಲ್ಲಿ ಇರುತ್ತಿತ್ತು. ಸಾಮಾನ್ಯ ಜನರಿಗೆ ಇದು ಅರ್ಥವಾಗುತ್ತಿರಲಿಲ್ಲ. ಆದುದರಿಂದ ಕಾಯಕ ಜೀವಿಗಳು ತಮ್ಮ ದಿನನಿತ್ಯದ ಆಡುಭಾಷೆಯಾದ ಕನ್ನಡವನ್ನು ಸಾಹಿತ್ಯದ ಮಾಧ್ಯಮವನ್ನಾಗಿ ಮಾಡಿಕೊಂಡರು. ತಮ್ಮ ಕಾಯಕದ ಉಪಕರಣಗಳನ್ನೆ ಸಾಂಕೇತಿಕವಾಗಿ ಬಳಸಿ ಅತ್ಯಂತ ಕಠಿಣವಾದ ವೇದಾಂತ ತತ್ವಗಳನ್ನು ಸರಳವಾಗಿ ವಚನಗಳಲ್ಲಿ ಬರೆದರು. ಜೀವನಾನುಭವ, ಶ್ರಮದ ಮಹತ್ವ, ಸಾಮಾಜಿಕ ಅಸಮಾನತೆಯ ವಿರುದ್ದದ ಧ್ವನಿ, ಮಾನವೀಯ ಮೌಲ್ಯಗಳಿಂದಾಗಿ ಸಾಹಿತ್ಯವು ಅರಮನೆಯಿಂದ ಹೊರಬಂದು ಶ್ರಮಜೀವಿಗಳ ಗುಡಿಸಲು ತಲುಪಿ ಜನಸಾಹಿತ್ಯವಾಗಿ ರೂಪುಗೊಂಡಿತು.

ಕಾಯಕದ ಮಹತ್ವವನ್ನು ತಿಳಿಸುವ ವಚನಗಳನ್ನು ಉದಾಹರಿಸುವುದಾದರೆ :

ಬಸವಣ್ಣನವರ ಒಂದು ವಚನ:

***ಕಾಯಕದಲ್ಲಿ ನಿರತನಾದಡೆ,***
***ಗುರುದರ್ಶನವಾದರೂ ಮರೆಯಬೇಕು,***
***ಲಿಂಗಪೂಜೆಯಾದರು ಮರೆಯಬೇಕು,***
***ಜಂಗಮ ಮುಂದೆ ನಿಂತಿದ್ದರೂ ಹಂಗು ಹರಿಯಬೇಕು,***
***ಕಾಯಕವೇ ಕೈಲಾಸವಾದ ಕಾರಣ,***
***ಚೆನ್ನಬಸವಣ್ಣಪ್ರಿಯ***
***ಕೂಡಲಸಂಗಮದೇವನೆಂದರಿತು ಮಾಡು.***

ಮೋಳಿಗೆ ಮಾರಯ್ಯನ ಒಂದು ವಚನ:

***ಕಾಯಕದಿಂದ ಬಂದುದ ಉಣಬಲ್ಲಡೆ***
***ಆ ಕಾಯಕಕ್ಕೆ ಕೈಲಾಸವೆಂಬ ಹೆಸರಾಯಿತ್ತು***
***ತನು ಕಷ್ಟವನ್ನರಿಯದೆ, ಮನ ಭ್ರಮೆಯ ಬಿಡದೆ,***
***ಅನ್ಯಾಯದ ದ್ರವ್ಯವ ತಂದು ಲಿಂಗಕ್ಕೆ ನೀಡಿದಡೆ,***
***ಅದು ಕಾಯಕವಲ್ಲ, ಮಾರಯ್ಯಪ್ರಿಯ ರೇಕಣ್ಣಪ್ರಿಯ ಸಿದ್ಧರಾಮೇಶ್ವರ.***

ಆಯ್ದಕ್ಕಿ ಮಾರಯ್ಯನವರ ವಚನ:

***ಕಾಯಕ ನಿಂದಿತ್ತಾದಡೆ, ಲಿಂಗಪೂಜೆ ನಿಂದಿತ್ತು.***
***ಕಾಯಕವೇ ಲಿಂಗಪೂಜೆಯಯ್ಯಾ,***
***ಕಾಯಕವೇ ಜಂಗಮ ದಾಸೋಹವಯ್ಯ,***
***ಅಮರೇಶ್ವರಲಿಂಗದ ಭಕ್ತಂಗೆ ಕಾಯಕವೇ ಪ್ರಾಣ ನೋಡಾ.***

ಕಾಯಕ ಜೀವಿಗಳನ್ನು ವೈದಿಕರು ಮತ್ತು ಶೈವರಿಬ್ಬರೂ ವಿದ್ಯೆಯ ವಲಯದಿಂದ ದೂರವಿಟ್ಟಿದ್ದರಿಂದ, ಇವರುಗಳು ತಾವು ಮಾಡುತ್ತಿದ್ದ ಕೆಲಸವನ್ನೆ ವಂಶಪಾರಂಪರ್ಯವಾಗಿ ಕಲಿತುದದರಿಂದ ವೃತ್ತಿಯ ಹೆಸರಿನಲ್ಲಿ ಅದನ್ನು ಕೀಳಾಗಿ ಕಂಡು ಚಮ್ಮಾರ–ಹೊಲೆಯ–ಚಂಡಾಲನೆಂಬ ಜಾತಿಗಳನ್ನು ಮಾಡಿ ಜನರನ್ನು ದೂರವಿಡಲಾಗಿತ್ತು. ಹೀಗೆ ತಮ್ಮನ್ನು ದೂರವಿಟ್ಟವರ ವಿರುದ್ದ ತಿರುಗಿ ಬೀಳುವುದಕ್ಕೆ ಅಗತ್ಯವಾದ ಒಗ್ಗಟ್ಟನ್ನು ರೂಪಿಸುವ ಕೆಲಸಕ್ಕೆ ಏಕದೇವತೋಪಾಸನೆಯ ಕರೆ ಅಗತ್ಯವಾಯಿತು. ಹಲವು ದೈವಗಳ ಪೂಜೆಯಲ್ಲಿ ಹರಿದು ಹಂಚಿ ಹೋಗಿದ್ದ ಕೆಳವರ್ಗದ ಜನ ಸಂಘಟಿತರಾಗುವುದಕ್ಕೆ ಇದು ಸಹಾಯ ಮಾಡಿತು.

ಇಷ್ಟೆಲ್ಲಾ ಹಿನ್ನೆಲೆಯಲ್ಲಿ ಹುಟ್ಟಿ ಬಂದ ವಚನಕಾರರ ಚಳವಳಿಯ ಬೆನ್ನೆಲುಬು ಕಾಯಕ

ಜೀವಿಗಳು (ಇದರಲ್ಲಿ ಕುಶಲಕರ್ಮಿಗಳು ಸೇರಿದ್ದಾರೆ) ಎಂಬುದಕ್ಕೆ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಜೇಡರ ದಾಸಿಮಯ್ಯ, ಮೇದರ ಕೇತಯ್ಯ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಮೋಳಿಗೆ ಮಾರಯ್ಯ, ಕೊಟ್ಟಣದ ರೆಮ್ಮವ್ವೆ, ತುರುಗಾಹಿ ರಾಮಣ್ಣ ಇವರೇ ಮೊದಲಾದ ವೃತ್ತಿಜೀವಿಗಳೇ ಸಾಕ್ಷಿ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ವಚನ ಚಳವಳಿಯಲ್ಲಿ ಕಾಯಕ ಜೀವಿಗಳ ಚಳವಳಿಯ ಮಹತ್ವ ಅನನ್ಯವಾದುದು. ಅದು ಕೇವಲ ಒಂದು ಧಾರ್ಮಿಕ ಸುಧಾರಣೆಯಾಗಿರದೆ, ಶ್ರಮಜೀವಿಗಳ ಮಾನವ ಹಕ್ಕುಗಳ ಹೋರಾಟವಾಗಿತ್ತು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆತ್ಮಗೌರವ, ಸಮಾನತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತಂದುಕೊಟ್ಟ ಹೆಗ್ಗಳಿಕೆ ಈ ಚಳವಳಿಯದ್ದು. ಲೋಕದ ಡೊಂಕನ್ನು ತಿದ್ದುವ ಮುನ್ನ 'ನಿಮ್ಮ ನಿಮ್ಮ ತನುವ ತಿದ್ದಿಕೊಳ್ಳಿ' ಎಂದು ಸಾರಿದ ಕಾಯಕಜೀವಿಗಳು ತಮ್ಮ ಪ್ರಾಮಾಣಿಕ ದುಡಿಮೆ ಮತ್ತು ಸರಳ ಜೀವನದ ಮೂಲಕ ಜಗತ್ತಿಗೆ ಹೊಸದೊಂದು ಸಮಾಜಮುಖಿ ದರ್ಶನವನ್ನು ನೀಡಿದರು. ಭಾರತೀಯ ಸಾಮಾಜಿಕ ಇತಿಹಾಸದಲ್ಲಿ ಕಾಯಕ ಜೀವಿಗಳ ಈ ಮಹತ್ವದ ಕ್ರಾಂತಿ ಇಂದಿಗೂ ಅಳಿಯದೆ ಪ್ರಜ್ವಲಿಸುತ್ತಿದೆ.

**ಪರಾಮರ್ಶನ ಗ್ರಂಥಗಳು**


- ಭೂಸನೂರಮಠ, ಎಸ್.ಸಿ. (1965). *ವಚನ ಸಾಹಿತ್ಯ ಸಂಗ್ರಹ.* ವಿದ್ಯಾಭ್ಯಾಸ ಇಲಾಖೆ, ಮೈಸೂರು ಸರ್ಕಾರ.
- ಚಿದಾನಂದಮೂರ್ತಿ, ಎಂ. (1979). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಚಿದಾನಂದಮೂರ್ತಿ, ಎಂ. (2022). ಬಸವಣ್ಣನವರು (ಒಂಬತ್ತನೇ ಮುದ್ರಣ). ಸ್ನೇಹ ಬುಕ್‌ಹೌಸ್.
- ಮುಗಳಿ, ರಂ.ಶ್ರೀ. (1953). *ಕನ್ನಡ ಸಾಹಿತ್ಯ ಚರಿತ್ರೆ.* ಉಷಾ ಸಾಹಿತ್ಯ ಮಾಲೆ.